# 'ಪುಲಿ'ಯ ಗರ್ಜನೆ

ತಮಿಳುನಾಡಿಗೆ ವಿವಾದಗಳು ಹೊಸತೇನಲ್ಲ; ಹಾಗೆಯೇ ವಿಜಯ್‌ಗೂ! ತಮಿಳಿನ ಸೂಪರ್‌ಸ್ಟಾರ್‌ಗಳ ಪಟ್ಟಿಯಲ್ಲಿ ರಜನಿಕಾಂತ್ ಬಿಟ್ಟರೆ ಅತ್ಯಂತ ಹೆಚ್ಚು 'ಸಕ್ರಿಯ ಅಭಿಮಾನಿ'ಗಳನ್ನು ಹೊಂದಿರುವ ನಟ ಈ ಜೋಸೆಫ್ ವಿಜಯ್ ಚಂದ್ರಶೇಖರ್. ಕಳೆದ ವಾರ ಈತನ 'ಪುಲಿ' ಚಿತ್ರ ಬಿಡುಗಡೆಯಾಗುವುದಕ್ಕೆ ಸರಿಯಾಗಿ ಮನೆಯ ಮೇಲೆ ಆದಾಯ ತೆರಿಗೆ ದಾಳಿ ನಡೆದಿದೆ. ಈತನ ಮನೆ ಮಾತ್ರವಲ್ಲ, ಚಿತ್ರದ ಇಬ್ಬರು ನಾಯಕಿಯರು ಮತ್ತು ನಿರ್ಮಾಪಕರ ಮನೆಗೂ ನುಗ್ಗಿರುವ ಅಧಿಕಾರಿಗಳು ಹಲವು ದಾಖಲೆಗಳನ್ನು ಹೊತ್ತೊಯ್ದಿದ್ದಾರೆ. ಆದರೆ ಈ ದಾಳಿ ಅಭಿಮಾನಿಗಳ ಉತ್ಸಾಹವನ್ನು ಕುಗ್ಗಿಸಿಲ್ಲ. ಪುಲಿ ಚಿತ್ರ ದಕ್ಷಿಣದ ರಾಜ್ಯಗಳಲ್ಲಿ ಅಬ್ಬರದ ಆರಂಭ ಕಂಡಿದೆ. ಹಾಗೆಂದು ಈ ಚಿತ್ರ ಸೂಪರ್‌ಹಿಟ್ ಆಗುತ್ತದೆಯೆ.. ಎನ್ನುವ ಗ್ಯಾರಂಟಿಯಿಲ್ಲ. ಮೊದಲ ಪ್ರದರ್ಶನದ ಪ್ರತಿಕ್ರಿಯೆ ಗಮನಿಸಿದರೆ, ಚಿತ್ರ ಅಷ್ಟೇನೂ ಅದ್ಭುತವಾಗಿ ಬಂದಿಲ್ಲ. ಒಮ್ಮೆ ನೋಡಬಹುದು ಎನ್ನುವಂತಿದೆ. ಆದರೆ ಅಭಿಮಾನಿಗಳು ಯಾವುದೇ ಚಿತ್ರವನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ವಿಜಯ್ ಚಿಂತೆಯಲ್ಲಿದ್ದಂತೆ ಕಾಣುತ್ತಿಲ್ಲ. ತಮಿಳಿನಲ್ಲಿ ಮಾತ್ರವಲ್ಲ ಮಲಯಾಳಂನಲ್ಲೂ ವಿಜಯ್‌ಗೆ ಮಾರುಕಟ್ಟೆ ಚೆನ್ನಾಗಿರುವುದರಿಂದ ನಷ್ಟದ ಬಾಬತ್ತು ಆಗಲಿಕ್ಕಿಲ್ಲ. ತಮಿಳಿನಲ್ಲಿ ಸದ್ಯಕ್ಕೆ ರಜನಿಕಾಂತ್ ಬಿಟ್ಟರೆ, ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ನಟ ಈ ವಿಜಯ್ ಎನ್ನುವುದು ಉದ್ಯಮದ ಒಳಗಿನ ಮಾತು. ಹೊಸ ಸಿನಿಮಾವೊಂದಕ್ಕೆ ಈತ 30 ಕೋಟಿ ರೂಪಾಯಿ (ತೆರಿಗೆ ಬಿಟ್ಟು) ಸಂಭಾವನೆ ಪಡೆದಿದ್ದಾನೆಂಬ ಸುದ್ದಿಗಳಿವೆ. ಈತನ ಸಮಕಾಲೀನ ಸೂಪರ್‌ಸ್ಟಾರ್‌ಗಳು 15–22 ಕೋಟಿಯ ನಡುವೆ ಓಲಾಡುತ್ತಿರುವುದನ್ನು ನೋಡಿದರೆ ವಿಜಯ್ ಸಂಭಾವನೆ ದಾಖಲೆಯೇ.



ಸಿನಿಮಾ ಕುಟುಂಬದ ಹಿನ್ನೆಲೆಯಿಂದಾಗಿ ವಿಜಯ್ ಬಾಲ್ಯದಲ್ಲೇ ನಟನೆಗೆ ಇಳಿದದ್ದು ಅಸಹಜವೇನಲ್ಲ. ತಂದೆ ಎಸ್.ಎ.ಚಂದ್ರಶೇಖರ್ ಯಶಸ್ವಿ ನಿರ್ಮಾಪಕ, ತಾಯಿ ಶೋಭಾ ಹಿನ್ನೆಲೆ ಗಾಯಕಿ. ಕುಟುಂಬದಲ್ಲೂ ಹಲವರು ಸಿನಿಮಾ ಉದ್ಯಮದಲ್ಲಿದ್ದಾರೆ. ಹಾಗಾಗಿ ಸಿನಿಮಾ ಜೀವನವನ್ನು ಅಚ್ಚುಕಟ್ಟಾಗಿ ಪ್ಲಾನ್ ಮಾಡಲು ಸಾಧ್ಯವಾಯಿತು. ಹಾಗೆಂದು ಆರಂಭದಲ್ಲೇ ಈತ ಯಶಸ್ಸಿನ ರುಚಿ ಅನುಭವಿಸಲಿಲ್ಲ. 1992ರಲ್ಲಿ ಬಂದ ಮೊದಲ ಸಿನಿಮಾದಲ್ಲಿ ಜಂಟಿ ನಾಯಕನ ಪಾತ್ರವಿತ್ತು. ಬಳಿಕ ಶಿವಾಜಿ ಗಣೇಶನ್‌ರಂತಹ ಮೇರುನಟನ ಜತೆಗೆ ನಟಿಸಿದ್ದಾಯ್ತು. ನಾಲ್ಕು ವರ್ಷಗಳ ಕಾಲ ಸಣ್ಣದಾಗಿ ಸೈಕಲ್ ಹೊಡೆದ ಬಳಿಕ, ಮೊದಲ ಸೂಪರ್‌ಹಿಟ್ ಚಿತ್ರ ಪಡೆಯಲು ಈತ 1996ರವರೆಗೆ ಕಾಯಬೇಕಾಯಿತು. 96ರಲ್ಲಿ ಬಂದ 'ಪೂವೇ ಉನಕ್ಕಾಗ' ವಿಜಯ್‌ಗೆ ತನ್ನ ನಟನೆಯ ಬಗ್ಗೆ ವಿಶ್ವಾಸ ಮೂಡಿಸಿದ ಚಿತ್ರ ಎನ್ನಬಹುದು. ಅಲ್ಲಿಂದೀಚೆಗೆ ಯಶಸ್ಸು ಮತ್ತು ಫ್ಲಾಪ್‌ಗಳು ಸಮನಾಗಿ ಈತನ ಬೆನ್ನತ್ತಿವೆ. 2001–02ರಲ್ಲಂತೂ ಈತನ ಚಿತ್ರಜೀವನ ಮುಗಿಯಿತು ಎಂದೇ ವಿಮರ್ಶಕರು ಲೆಕ್ಕ ಹಾಕಿದ್ದರು. ಆದರೆ 2004ರಲ್ಲಿ ಬಂದ ಘಿಲ್ಲಿ ಮತ್ತು ಮಧುರೈ ಚಿತ್ರಗಳು ವಿಜಯ್‌ನ ಸ್ಟಾರ್ ಇಮೇಜನ್ನು ಎತ್ತರಕ್ಕೇರಿಸಿದವು. ಹಾಗೆ ನೋಡಿದರೆ 'ತುಪಾಕಿ' ಚಿತ್ರ ಈತನ ವೃತ್ತಿಜೀವನದ ಮೈಲಿಗಲ್ಲು ಎನ್ನಬಹುದು. ಶಿವಾಜಿ, ಮಗಧೀರ ಮತ್ತು ಎಂದಿರನ್ ಸಿನಿಮಾಗಳು ತಮಿಳಿನಲ್ಲಿ ಅದಾಗಲೇ 100 ಕೋಟಿ ರೂಪಾಯಿ ಕಲೆಕ್ಷನ್ ಗಡಿ ದಾಟಿ ನಿರ್ಮಿಸಿದ್ದ ದಾಖಲೆಯನ್ನು ವಿಜಯ್ ತುಪಾಕಿ ಕೂಡಾ ಮಾಡಿದ್ದು ಸುಳ್ಳಲ್ಲ. ಆ ಚಿತ್ರದ ನಿರ್ಮಾಪಕರ ಪ್ರಕಾರ ತುಪಾಕಿ ಗಳಿಸಿದ ಮೊತ್ತ ಬರೋಬ್ಬರಿ 185 ಕೋಟಿ.

ಈಗ 'ಪುಲಿ'ಯ ಬಿಡುಗಡೆ ಸಂದರ್ಭದಲ್ಲಿ ಐಟಿ ದಾಳಿಯಿಂದ ಕಂಗೆಟ್ಟಂತೆ ಹಿಂದೆ 'ತಲೈವ' ಸಿನಿಮಾ ಬಿಡುಗಡೆಯ ಸಂದರ್ಭದಲ್ಲೂ ವಿಜಯ್ ಏಟು ತಿಂದಿದ್ದರು. ತಲೈವ ಸಿನಿಮಾ ವಿವಾದಗಳಿಗೆ ಸಿಕ್ಕು 15 ದಿನಗಳ ಕಾಲ ಬಿಡುಗಡೆಯೇ ಆಗಲಿಲ್ಲ. ಆ ಬಳಿಕ ಥಿಯೇಟರ್‌ಗೆ ಬಂದರೂ ಅದಾಗಲೇ ಸಾವಿರಾರು ನಕಲಿ ಸಿ.ಡಿ ಗಳು ಮಾರುಕಟ್ಟೆಗೆ ಬಂದು ಚಿತ್ರ ಬಾಕ್ಸಾಫೀಸ್‌ನಲ್ಲಿ ಮಗ್ಗಾ ಮಲಗಿತು. ಕೊನೆಗೆ ತಲೈವ ನಿರ್ಮಾಪಕರ ಅರ್ಧ ನಷ್ಟವನ್ನು ಸ್ವತಃ ವಿಜಯ್ ತುಂಬಿಕೊಟ್ಟಿದ್ದರು. ಈ ವಿಷಯದಲ್ಲೂ ವಿಜಯ್ ರಜನಿಕಾಂತ್‌ರನ್ನೇ ಅನುಸರಿಸಿದಂತಿದೆ. 'ಬಾಡಿಗಾರ್ಡ್' ಹಿಂದಿ ಚಿತ್ರದ ತಮಿಳು ರಿಮೇಕ್ ಬಿಡುಗಡೆಯಾದಾಗ ಡಿಎಂಕೆ ಕಾರ್ಯಕರ್ತರು ಅಡ್ಡಿ ಪಡಿಸಿದ್ದರು. 4 ಕೋಟಿ ರೂಪಾಯಿ ಹೆಚ್ಚುವರಿ ಖರ್ಚು ಮಾಡಿ ಚಿತ್ರ ಬಿಡುಗಡೆ ಮಾಡಿ ವಿಜಯ್ ವಿರೋಧಿಗಳಿಗೆ ಸವಾಲು ಒಡ್ಡಿದ್ದರು.

ನಟನೆಯಲ್ಲಿ ವಿಜಯ್ ಹೆಚ್ಚುಗಾರಿಕೆ ಹೇಳಿಕೊಳ್ಳುವಂತಹದ್ದೇನೂ ಇಲ್ಲ. ಆದರೆ ತಮಿಳು ಚಿತ್ರರಸಿಕರು ಒಬ್ಬ ನಟನನ್ನು ತಲೆಯಲ್ಲಿ ಎತ್ತಿಕೊಂಡು ಮೆರೆಯಲು ಆರಂಭಿಸಿದರೆ ಅವರಿಗೆ ನಟನೆಯ ಅಗತ್ಯವೂ ಇಲ್ಲ. ಹಾಗೆಂದೇ ಭಾರತದ '100 ಮಂದಿ ತಾರೆ'ಯರ ಪಟ್ಟಿಯಲ್ಲಿ ವಿಜಯ್ 49ನೇ ಸ್ಥಾನ ಪಡೆದಿದ್ದಾರೆ. ಕೋಕಕೋಲ, ಚೆನ್ನೈ ಸೂಪರ್ ಕಿಂಗ್ಸ್ ಕ್ರಿಕೆಟ್ ತಂಡ, ಜೋಸ್ ಅಲುಕ್ಕಾಸ್ ಮುಂತಾದವುಗಳ ಬ್ರ್ಯಾಂಡ್ ಅಂಬಾಸಿಡರ್ ಆಗಿಯೂ ಮಿಂಚುತ್ತಿದ್ದಾರೆ. 'ಪುಲಿ' ಗಟ್ಟಿಯಾಗಿ ಗರ್ಜಿಸದಿದ್ದರೂ ವಿಜಯ್ ತಾರಾಪಟ್ಟಕ್ಕೆ ಸದ್ಯಕ್ಕೆ ಮಂಕು ಕವಿಯುವುದಿಲ್ಲ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65